ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು

◆ ಜಗತ್ತಿನಲ್ಲಿ ಎಲ್ಲರನ್ನೂ ಸಮನಾಗಿ ನೋಡುವ ವಸ್ತು ಯಾವುದು?



ಕನ್ನಡಿ.

ಎಸ್.ಎ. ಮೋಹನರಾಜು, ಶಂಕರಘಟ್ಟ

◆ ಜೋಗ್ ಫಾಲ್ಸ್‌ಗೂ, ಜೋಕ್ ಫಾಲ್ಸ್‌ಗೂ ಏನಾದರೂ ಸಂಬಂಧ ಇದೆಯೆ?

ಇದೆಯಲ್ಲ; ಎರಡೂ ಶತಶತಮಾನಗಳಿಂದಲೂ ರಿಪೀಟ್ ಆಗುತ್ತಲೇ ಇವೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಹೆಣ್ಣಿಗೆ ಬರುವುದು ಗರ್ವ ಮತ್ತು ಗರ್ಭ. ಗಂಡಿಗೆ?

ಕೊಬ್ಬು ಮತ್ತು ಪಬ್ಬು.

ಬಿ.ಎಲ್. ಸೀತಾರಾಮಾಚಾರಿ, ದಾವಣಗೆರೆ

◆ ಸತ್ತವನನ್ನು ಮತ್ತೊಮ್ಮೆ ಹುಟ್ಟಿ ಬಾ ಎನ್ನುವ ಔಚಿತ್ಯವಾದರೂ ಏನು ರಾಮ್‌ಜಿ?




'ಇನ್ನೊಂದು ಛಾನ್ಸ್ ಕೊಟ್ಟು ನೋಡು, ಸರ್‍ರಿಯಾಗಿ ಇರುವುದನ್ನೆಲ್ಲ ಸೆಳೆದುಕೊಳ್ಳುತ್ತೇವೆ' ಎಂಬ ಒಳ ಅರ್ಥ.

ಜಿ.ಎಚ್. ನಾಯ್ಕ, ಹೊನ್ನಾವರ

◆ ಕಾಂಗ್ರೆಸ್ಸಿಗರು ಪಾಂಡವರಂತೆ; ಬಿಜೆಪಿಯವರು ಕೌರವರಂತೆ. ಕೃಷ್ಣ ಯಾರು ಸಾರ್?

ಪಾಂಡವ ಮೀನು; ನುಣುಚಿಕೊಳ್ಳುವ ಬುದ್ಧಿ. ಕೌರವ ಕಾಗೆ; ಬರಿದೇ ಅರಚಾಟ. ಕೃಷ್ಣ ಬ್ಲ್ಯಾಕ್ ಮನಿ!

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಮುತ್ತು ಮುಪ್ಪು; ವ್ಯತ್ಯಾಸವೇನು?

ಮುತ್ತು ಬದುಕಿಗೆ ರುಚಿಯೀವ ತುತ್ತು; ಮುಪ್ಪು ಜೀವನದ ಮುತ್ತುಗಳನ್ನು ಹೊತ್ತ ಚಿಪ್ಪು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

◆ ಬದಲಾವಣೆಯನ್ನು ಬಯಸುತ್ತಿದ್ದಾನೆಯೇ ಮತದಾರ?

ಹೌದು. ವೋಟಿಗಾಗಿ ಹೋದ ಚುನಾವಣೆಯಲ್ಲಿ ಕೊಟ್ಟ ವಸ್ತುವಿಗಿಂತ ಜಾಸ್ತಿ ಬೆಲೆಯದನ್ನು ಅಪೇಕ್ಷಿಸುತ್ತಿದ್ದಾನೆ.

ಹನುಮಂತಪ್ಪ ಆರ್.ಕೆ. ಸಾಗರ

◆ ಮನೆಹಾಳು ಟೀವಿ ಧಾರಾವಾಹಿಗಳಿಂದ ವೀಕ್ಷಕರಿಗೆ ಮುಕ್ತಿ ಯಾವಾಗ?

ರಿಮೋಟ್‌ನ ಸೆಲ್ ತೆಗೆದ ತಕ್ಷಣ!

ನರಸಿಂಹ ಪೈ ಹೊನ್ನಾವರ

◆ ಕರುನಾಡಲ್ಲಿ ಕನ್ನಡದ ಕಂಪು ಏಕೆ ಕಡಿಮೆಯಾಗುತ್ತಿದೆ?

ಏಕೆಂದರೆ ಕರುನಾಡಿನ ಕರುಗಳು ಅಂಬಾ ಎನ್ನುವ ಬದಲು moo ಎನ್ನುತ್ತಿವೆ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕಾ

◆ 'ಸರ್ಕಾರದ ಕೆಲಸ ದೇವರ ಕೆಲಸ' ಇಂದು ಈ ಮಾತು ಎಷ್ಟು ಪ್ರಸ್ತುತ?

ಕೊಂಚ ಬದಲಾಯಿಸಿಕೊಳ್ಳಿ; ಕುಮಾರಣ್ಣ ಇರುವವರೆಗೆ ಸರ್ಕಾರದ ಕೆಲಸ ದೇವೇಗೌಡರ ಕೆಲಸ.

ವಿದ್ಯಾ ಎನ್. ಪೈ ಕಾಸರಕೋಡ

◆ ಪ್ರಕೃತಿ ನಮಗೆ ದಿನವೂ ಹೇಳುವ ಪಾಠ ಯಾವುದು?

ಮರೆಯಾಗುವವರೆಗೆ ಮರವಾಗಿ ಬಾಳು ಎಂದು.

ರಮೇಶ ಜ. ಬೊಂಗಾಳೆ ಬೈಲಹೊಂಗಲ

◆ ಹೆಣ್ಣುಮಕ್ಕಳಿಗೆ ಹೂವು ಇಷ್ಟ. ಗಂಡಸರಿಗೆ?

ಇವರು ಹೇಳಿದ್ದಕ್ಕೆಲ್ಲ ಆ ಹೆಣ್ಣುಗಳು ಹ್ಞೂಂ, ಊ ಎನ್ನುವುದು ಇಷ್ಟ.

ಕೊಟ್ಟೂರು ಜವಳಿ ಜಯಣ್ಣ, ದಾವಣಗೆರೆ

◆ ಸೂಲಗಿತ್ತಿ ನರಸಮ್ಮನಿಗೂ, ಸಾಲು ಮರದ ತಿಮ್ಮಕ್ಕನಿಗೂ ಯಾವ ಸಾಮ್ಯತೆ ಇದೆ?

ಇಬ್ಬರೂ ಕುಡಿಗಳನ್ನು ಹೊರತರುವವರೇ ಕುಲದ್ದೊಬ್ಬರು, ನೆಲದ್ದೊಬ್ಬರು.

## ಬಹುಮಾನಿತ ಪ್ರಶ್ನೆ

ಹೆಚ್.ಆರ್. ಕೊಳಗಿ, ಸಾಗರ

◆ ಚಲನಚಿತ್ರ ಮತ್ತು ಟೀವಿ ಧಾರಾವಾಹಿಗಳಲ್ಲಿ ಪುರುಷರು ದಾಡಿ ಬೆಳೆಸುವುದೇಕೆ? ಸ್ವಚ್ಛವಾಗಿ ಶೇವ್ ಮಾಡಿಕೊಳ್ಳಬಾರದೆ?

ಶೇವ್ ಮಾಡಿಕೊಂಡೇ ಬರುತ್ತಾರಂತೆ. ಸೆಟ್ ರೆಡಿಯಾಗಿ, ಶೂಟಿಂಗ್ ಶುರುವಾಗುವ ವೇಳೆಗೆ ಗಡ್ಡ ಬೆಳೆದಿರುತ್ತದೆ.

ದಿನೇಶ್, ಗುಡ್ಡದೂರು

◆ ಗಂಡ ಹೆಂಡತಿಯನ್ನು ಇತರರಿಗೆ ಪರಿಚಯಿಸುವಾಗ 'ನಮ್ಮ ಮನೆಯವರು' ಎಂದು ಪರಿಚಯಿಸಲು ಕಾರಣ?

ಆಕೆ 'ಮನೆ'ಯವರಷ್ಟೆ; 'ಮನ'ದವರು ಇನ್ನಾರೋ ಇರುತ್ತಾರಂತೆ.

ಅಮರಯ್ಯಾ ಪತ್ರಿಮಠ, ಸುರಪುರ

◆ ತ್ರಿಶಂಕು ಸ್ವರ್ಗ ಹೇಗಿರುತ್ತದೆ?




ಒಟ್ಟಿಗೆ ಮೂರು ಮೂರು ಜನ ಶಂಖ ಹೊಡೆದುಕೊಳ್ಳುವ ಪ್ಯಾನಲ್ ಚರ್ಚೆಯಂತೆ.

ಕುಮಾರ ಚಲವಾದಿ, ಹಾಸನ

◆ ಕೆಲವರು ಸ್ಮಶಾನಗಳಲ್ಲಿ ಮಲಗುತ್ತಾರಲ್ಲ, ಅವರು ದೆವ್ವಭೂತಗಳಿಗೆ ಹೆದರುವುದಿಲ್ಲವೆ?

ಊಹೂಂ. ಜನನಾಯಕರ ಚಿತ್ರವನ್ನು ತಾಯಿತವಾಗಿ ಕಟ್ಟಿಕೊಂಡರೆ ದೆವ್ವಭೂತಗಳು ಹತ್ತಿರ ಸುಳಿಯವಂತೆ.

ಗಂಜಾಂ ನಾಗರಾಜ, ಮೈಸೂರು

◆ 'ದೀರ್ಘಸುಮಂಗಲೀಭವ' ಎಂಬ ಆಶೀರ್ವಾದದ ಒಳಮರ್ಮ 'ಪತಿಗಿಂತ ಮುಂಚೆ ನೀನೇ ಸಾಯಿ' ಎಂದಲ್ಲವೇ?

ದೀರ್ಘಕಾಲ ಒಟ್ಟಿಗಿದ್ದು, ಒಟ್ಟಿಗೇ ಸಾಯಿ ಎಂದೂ ಆಗಬಹುದಲ್ಲ! ಕೂಲಿಂಗ್ ಗ್ಲಾಸ್ ತೆಗೆದರೆ ಬೆಳಕು ಕಂಡೀತು.

■ ರಾಮ್